**ದಿನಾಂಕಃ 18.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಸ್ವ ಪ್ರಮಾಣೀಕೃತ ಹೇಳಿಕೆಃ ಪಿರ್ಯಾದುದಾರರ ಪರ ವಕೀಲರಿಂದಃ**

ನಾನು ಇಂದು ಸಲ್ಲಿಸಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಗಳಿರುವ ಅಂಶಗಳು ನನ್ನ ತಿಳುವಳಿಕೆಯ ಮಟ್ಟಿಗೆ ಸತ್ಯವಾಗಿರುತ್ತವೆ. ಅದನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ.

| |
|---|
| ಆರೋಪಿ ನೀಡಿರುವ ಚೆಕ್ಕನ್ನು **ನಿ.ಪಿ.1** ಎಂದು, ಆರೋಪಿ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. |
| ಬ್ಯಾಂಕಿನ ಹಿಂಬರಹವನ್ನು **ನಿ.ಪಿ.2** ಎಂದು ಗುರುತಿಸಲಾಯಿತು. |
| ಆರೋಪಿಗೆ ವಕೀಲರ ಮುಖಾಂತರ ನೀಡಿರುವ ನೋಟಿಸಿನ ಕಛೇರಿಯ ಪ್ರತಿಯನ್ನು **ನಿ.ಪಿ.3** ಎಂದು ಗುರುತಿಸಲಾಯಿತು. |
| ಅಂಚೆ ಕಛೇರಿಯವರು ನೀಡಿದಂತಹ ಅಂಚೆ ರಶೀದಿಯನ್ನು **ನಿ.ಪಿ.4** ಎಂದು ಗುರುತಿಸಲಾಯಿತು. |
| ಹಿಂತಿರುಗಿದ ಅಂಚೆ ಲಕೋಟೆಯನ್ನು **ನಿ.ಪಿ.5** ಎಂದು ಗುರುತಿಸಲಾಯಿತು. |
| ಅಂಚೆ ಲಕೋಟೆಯನ್ನು ನ್ಯಾಯಾಲಯದಲ್ಲಿ ತೆರೆದು ನೋಡಿದಾಗ ಅದರಲ್ಲಿ ಆರೋಪಿಗೆ ನೀಡಿದ ನೋಟೀಸು ಕಂಡುಬಂದಿದೆ. ಅದನ್ನು **ನಿ.ಪಿ.5(ಎ)** ಎಂದು ಗುರುತಿಸಲಾಯಿತು. |

ಆದ್ದರಿಂದ ದೂರಿನಲ್ಲಿ ಕೋರಿದಂತೆ ಆದೇಶ ಮಾಡಲು ಈ ಮೂಲಕ ಕೇಳಿಕೊಳ್ಳುತ್ತೇನೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.